# ನಿದ್ದೆ ತಿಳಿದೆದ್ದ ಪಿನಾಕಿನಿ

**ಗೌರಿಬಿದನೂರು, ಚಿಕ್ಕಬಳ್ಳಾಪುರ ಪರಿಸರದಲ್ಲಿ ಮರೀಚಿಕೆಯಂತಿದ್ದ ಉತ್ತರ ಪಿನಾಕಿನಿ ನದಿ ನಿದ್ದೆಯಿಂದ ಎಚ್ಚರಗೊಂಡಂತೆ ಮೈದುಂಬಿ ಹರಿದಿದೆ. ನದಿ ಹರಿವಿನುದ್ದಕ್ಕೂ ಎಡತಾಕುವ ಬಾವಿ–ಕೆರೆಗಳಲ್ಲಿ ಗಂಗಾವತರಣದ ಸಂಭ್ರಮ.**

**■ ಪ್ರಶಾಂತ ಕುರ್ಕೆ**

‘ಉತ್ತರ ಪಿನಾಕಿನಿ ನದಿಲೊ ಮಳ್ಳಿ ಪೀನಗಳು ತೇಲಿ ಒಚ್ಚಾಯಿ.’ ಗೌರಿಬಿದನೂರು ತಾಲ್ಲೂಕಿನಲ್ಲಿ ಉತ್ತರ ಪಿನಾಕಿನಿ ನದಿ ಹಾದುಹೋಗುವ ಹಳ್ಳಿಗಳಲ್ಲಿ ಇತ್ತೀಚೆಗಿನ ಮಳೆಯ ಉಬ್ಬರದಲ್ಲಿ ಕೇಳಿಬಂದ ಮಾತಿದು.

‘ಹೆಣಗಳು ತೇಲುವ ನದಿ’ ಎನ್ನುವುದು ಉತ್ತರ ಪಿನಾಕಿನಿ ನದಿಗೆ ಅಂಟಿಕೊಂಡಿರುವ ಕುಖ್ಯಾತಿ. ಹಿಂದೆಲ್ಲ ಮಳೆ–ಬೆಳೆ ಚೆನ್ನಾಗಿದ್ದ ದಿನಗಳಲ್ಲಿ ನದಿ ಮೈದುಂಬಿ ಹರಿದಾಗಲೆಲ್ಲ ಹೆಣಗಳು ತೇಲಿಬರುತ್ತಿದ್ದವಂತೆ. ಹೆಣಗಳಿಗೆ ತೆಲುಗಿನಲ್ಲಿ ಪೀನಗಲು ಎಂದು ಹೆಸರು. ನದಿ ಹರಿಯುವ ಪರಿಸರದಲ್ಲಿ ತೆಲುಗಿನ ಪ್ರಾಬಲ್ಯ ಹೆಚ್ಚಾದುದರಿಂದ, ‘ಪೀನಗಲು ಪಿನಾಕಿನಿ’ ಎನ್ನುವ ಹೆಸರಿನ ಬಳಕೆ ಚಾಲ್ತಿಗೆ ಬಂದಿದೆ.

ಹೆಣಗಳ ವಿಷಯ ಇರಲಿ, ನದಿ ಮೈದುಂಬಿ ಹರಿದು ಮೂರು ದಶಕಗಳೇ ಕಳೆದಿದ್ದವು. ಜನರ ನೆನಪುಗಳಲ್ಲಷ್ಟೇ ಜಿಲ್ಲೆಯಲ್ಲಿ ಸುರಿದ ಕುಂಭದ್ರೋಣ ಮಳೆ ಉತ್ತರ ಪಿನಾಕಿನಿ ನದಿ ಮತ್ತೆ ಮೈದುಂಬಿ ಹರಿಯುವಂತೆ ಮಾಡಿದೆ. ಈ ನೀರ ಹರಿವಿನೊಂದಿಗೆ ‘ಪೀನಗಲ ಪೆನ್ನೇರು’ ಖ್ಯಾತಿಗೆ ತಕ್ಕಂತೆ ನದಿಯಲ್ಲಿ ಮತ್ತೆ ಎರಡು ಮೂರು ಹೆಣಗಳು ತೇಲಿವೆ. ಉತ್ತರ ಪಿನಾಕಿನಿ ಹೆಣ ತೇಲಿಸುವಷ್ಟು ಮೈದುಂಬಿ ಹರಿಯಿತಲ್ಲ ಎನ್ನುವ ಸಂತಸ, ಸಂಭ್ರಮ ಜಿಲ್ಲೆಯ ಜನರದ್ದು.

ಮೂರ್ನಾಲ್ಕು ದಶಕಗಳ ಹಿಂದೆ ಗೌರಿಬಿದನೂರು ತಾಲ್ಲೂಕಷ್ಟೇ ಅಲ್ಲ, ಚಿಕ್ಕಬಳ್ಳಾಪುರದ ಪರಿಸರದಲ್ಲೂ ಪಿನಾಕಿನಿಯ ನೀರ ಹೆಜ್ಜೆಗಳು ಗಾಢವಾಗಿದ್ದವು. ನದಿ ಹರಿಯುವ ಪ್ರದೇಶದುದ್ದಕ್ಕೂ ಅಂತರ್ಜಲ ಸಮೃದ್ಧವಾಗಿತ್ತು. ರೈತರ ಆರ್ಥಿಕ ಬದುಕನ್ನು ಸಮೃದ್ಧಗೊಳಿಸುವಲ್ಲಿ ಈ ನದಿಯ ಪಾತ್ರ ಮಹತ್ವದ್ದಾಗಿತ್ತು. ಕಾಲಾನಂತರ ನದಿಯ ಹರಿವು ಹೆಚ್ಚೂಕಡಿಮೆ ಸ್ಥಗಿತವಾಯಿತು. ನದಿಯನ್ನು ವಿಕಾರಗೊಳಿಸುವ ಕೆಲಸವೂ ಎಗ್ಗಿಲ್ಲದೆ ನಡೆಯಿತು. ಈಗ ಅಸಾಧಾರಣ ಮಳೆಯಿಂದಾಗಿ ನದಿ ಮತ್ತೆ ಭೋರ್ಗರೆದಿದೆ. ಬತ್ತಿದ್ದ ಕೊಳವೆಬಾವಿಗಳಲ್ಲಿ ಅಂತರ್ಜಲ ಕಾಣಿಸಿಕೊಂಡಿದೆ. ತಾನು ಹರಿವ ಹಾದಿಯಲ್ಲಿ ಸಿಗುವ ಕೆರೆ ಕಟ್ಟೆಗಳ ಒಡಲನ್ನೂ ನದಿ ತುಂಬಿಸಿದೆ.

ಬರದ ನಾಡಿನ ಹಣೆಪಟ್ಟಿಯ ಗೌರಿಬಿದನೂರು ಉತ್ತರ ಪಿನಾಕಿನಿಯ ಕಾರಣದಿಂದ ಜೀವಜಲವನ್ನು ಕಂಡಿದೆ. ಅಂದಮೇಲೆ, ಜನರಲ್ಲಿ ಖುಷಿ ಸಹಜವಲ್ಲವೇ? ಉತ್ತರ ಪಿನಾಕಿನಿ ನದಿ ಮೈದುಂಬಿದ್ದನ್ನು ಕಾಣಲು ನೆರೆಹೊರೆಯ ಜಿಲ್ಲೆಯ ಜನರು ಸಹ ಗೌರಿಬಿದನೂರಿನತ್ತ ಎಡತಾಕಿದ್ದಾರೆ.

ನಂದಿಬೆಟ್ಟದಲ್ಲಿ ಹುಟ್ಟುವ ಉತ್ತರ ಪಿನಾಕಿನಿ 586 ಕಿ.ಮೀ. ದೂರ ಹರಿದು ಆಂಧ್ರಪ್ರದೇಶದ ನೆಲ್ಲೂರು ಜಿಲ್ಲೆಯ ಊಟಕೂರು ಎಂಬಲ್ಲಿ ಬಂಗಾಳಕೊಲ್ಲಿ ಸೇರುತ್ತದೆ. ಅಂದಹಾಗೆ, ಉತ್ತರ ಪಿನಾಕಿನಿಯ ಹರಿವು ನಮಗಿಂತ ಆಂಧ್ರಪ್ರದೇಶದ ಜನರಿಗೆ ಹೆಚ್ಚು ಸಂತೋಷ, ಸಂಭ್ರಮ ಉಂಟುಮಾಡುತ್ತದೆ. ಏಕೆಂದರೆ, ಈ ನದಿ ಹೆಚ್ಚು ವಿಸ್ತಾರವಾಗಿ ಹರಿಯುವುದು ಆಂಧ್ರಪ್ರದೇಶದಲ್ಲಿ. ಪೆನ್ನೇರು ಎಂದರೆ ತೆಲುಗಿನಲ್ಲಿ ದೊಡ್ಡ ನದಿ ಎಂದರ್ಥ. ರಾಯಲ ಸೀಮೆಯ ಭಾಗದಲ್ಲಿ ಪೆನ್ನಾರ್, ಪೆನ್ನೇರು ಹೆಸರಿನಲ್ಲಿ ಹರಿಯುವ ಈ ನದಿ – ಅನಂತಪುರ, ಕಡಪ, ಕರ್ನೂಲು, ನೆಲ್ಲೂರು ಜಿಲ್ಲೆಯ ಜನರ ನೆಚ್ಚಿನ ನದಿ.

ನಂದಿಯಿಂದ ಮಂಚೇನಹಳ್ಳಿ, ಗೌರಿಬಿದನೂರು, ವಿದುರಾಶ್ವತ್ಥ,

